ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಂಸತ್

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 12/12/2019

## ವಲಸೆ ಬಂದ ಮುಸ್ಲಿಮೇತರರಿಗೆ ಭಾರತೀಯ ಪಟ್ಟ

# ಪೌರತ್ವ ಮಸೂದೆ ಪಾಸ್

### ಬಿಸಿ ಬಿಸಿ ಚರ್ಚೆಯ ಬಳಿಕ ರಾಜ್ಯಸಭೆಯಲ್ಲೂ ಮಸೂದೆ ಅಂಗೀಕಾರ

### ಮೋದಿ ಸರ್ಕಾರಕ್ಕೆ ಮಹತ್ವದ ಜಯ | ರಾಷ್ಟ್ರಪತಿ ಅಂಕಿತವಷ್ಟೇ ಬಾಕಿ

• **ಪಿಟಿಐ** ನವದೆಹಲಿ

ಭಾರೀ ಬಿಸಿ ಬಿಸಿ ಚರ್ಚೆ ಬಳಿಕ ಮಹತ್ವದ ರಾಷ್ಟ್ರೀಯ ಪೌರತ್ವ (ತಿದ್ದುಪಡಿ) ಮಸೂದೆಗೆ ರಾಜ್ಯಸಭೆ ಬುಧವಾರ ಅನುಮೋದನೆ ನೀಡಿದೆ. ಇದರಿಂದ ಸಂಸತ್ತಿನ ಉಭಯ ಸದನಗಳು ವಿಧೇಯಕಕ್ಕೆ ಒಪ್ಪಿಗೆ ನೀಡಿದಂತಾಗಿದೆ. ಹೀಗಾಗಿ ಪಾಸಾಗಿರುವ ವಿಧೇಯಕಕ್ಕೆ ರಾಷ್ಟ್ರಪತಿಗಳ ಅಂಕಿತದ ಔಪಚಾರಿಕತೆ ಮುಗಿದ ಬಳಿಕ ಪಾಕ್, ಬಾಂಗ್ಲಾ ಹಾಗೂ ಅಫ್ಘಾನಿಸ್ತಾನಗಳಲ್ಲಿನ ಧಾರ್ಮಿಕ ಉಪದ್ರವಗಳಿಂದ ಬೇಸತ್ತು, ಭಾರತಕ್ಕೆ ಆಶ್ರಯ ಬಯಸಿ ಬಂದಿರುವ ಹಿಂದು, ಸಿಖ್, ಬೌದ್ಧ, ಜೈನ, ಪಾರ್ಸಿ ಹಾಗೂ ಕ್ರೈಸ್ತರಿಗೆ ಭಾರತೀಯ ಪೌರತ್ವ ಲಭಿಸಲಿದೆ.

ಬುಧವಾರ ಮಧ್ಯಾಹ್ನದಿಂದ ರಾತ್ರಿ 9 ಗಂಟೆಯವರೆಗೆ ನಡೆದ 7 ತಾಸು ಸುದೀರ್ಘ ಚರ್ಚೆಯ ಬಳಿಕ ಮಸೂದೆಯನ್ನು ಮತಕ್ಕೆ ಹಾಕಿದಾಗ, ಮಸೂದೆ ಪರ 125 ಮತಗಳು ಚಲಾವಣೆ ಆದರೆ, ವಿರುದ್ಧವಾಗಿ 105 ಮತ ಚಲಾವಣೆ ಆಯಿತು. ಈ ಮೂಲಕ ಮಸೂದೆ ಅಂಗೀಕಾರಗೊಂಡಿತು. 245 ಸದಸ್ಯಬಲದ ರಾಜ್ಯಸಭೆಯಲ್ಲಿ ಈಗ 240 ಸದಸ್ಯರು ಇದ್ದು, ಮತದಾನದಿಂದ 10 ಸದಸ್ಯರು ದೂರ ಉಳಿದರು. ಲೋಕಸಭೆಯಲ್ಲಿ ವಿಧೇಯಕ ಬೆಂಬಲಿಸಿದ್ದ ಶಿವಸೇನೆಯು, ರಾಜ್ಯಸಭೆಯಲ್ಲಿ ಮಸೂದೆ ವಿರೋಧಿಸಿ ಮತದಾನಕ್ಕೆ ಬಹಿಷ್ಕಾರ ಹಾಕಿದ್ದು ವಿಶೇಷ.

➘ 14

## ಮಸೂದೆಯಲ್ಲೇನಿದೆ?

- ಪಾಕ್, ಬಾಂಗ್ಲಾ, ಆಫ್ಘಾನಿಸ್ತಾನದಿಂದ ಭಾರತಕ್ಕೆ ವಲಸೆ ಬಂದ ಹಿಂದು, ಸಿಖ್, ಬೌದ್ಧ, ಜೈನ, ಪಾರ್ಸಿ, ಕ್ರೈಸ್ತರಿಗೆ ಭಾರತೀಯ ಪೌರತ್ವ
- ಈ ಜನರು 2014ರ ಡಿ.31ರೊಳಗೆ ಭಾರತಕ್ಕೆ ಬಂದಿದ್ದರೆ ಭಾರತೀಯ ಪೌರ ಎಂದು ಪರಿಗಣನೆ. ಅಕ್ರಮ ವಲಸಿಗ ಎಂದು ಪರಿಗಣಿಸಲ್ಲ
- ನಿರಾಶ್ರಿತರಾಗಿ ಭಾರತದಲ್ಲಿ ಈ ಮುಂಚಿನ 11 ವರ್ಷದ ಬದಲು 5 ವರ್ಷ ನೆಲೆಸಿದ್ದರೆ ಸಾಕು. ಅವರಿಗೆ ಭಾರತೀಯ ಪೌರತ್ವ ಲಭ್ಯ
- ಇಂತಹ ನಿರಾಶ್ರಿತರನ್ನು ಅಕ್ರಮ ವಲಸಿಗರು ಎಂದು ಪರಿಗಣಿಸಿ ಕೇಸು ದಾಖಲಾಗಿದ್ದರೆ ಅಂತಹ ಪ್ರಕರಣಗಳ ರದ್ದತಿಗೂ ಅವಕಾಶ
- ಅರುಣಾಚಲ, ನಾಗಾಲ್ಯಾಂಡ್, ಮಿಜೋರಂ, ಮಣಿಪುರ ಹಾಗೂ ಅಸ್ಸಾಂ, ಮೇಘಾಲಯ, ತ್ರಿಪುರದ ಆದಿವಾಸಿ ಪ್ರದೇಶಗಳಿಗೆ ವಿನಾಯ್ತಿ

## ಈಶಾನ್ಯ ರಾಜ್ಯಗಳಲ್ಲಿ ಪ್ರತಿಭಟನೆ, ಹಿಂಸಾಚಾರ

ಗುವಾಹಟಿ/ನವದೆಹಲಿ: ಪೌರತ್ವ ಮಸೂದೆ ವಿರೋಧಿಸಿ ಈಶಾನ್ಯ ರಾಜ್ಯಗಳಲ್ಲಿ ಜನರ ಆಕ್ರೋಶ ಭುಗಿಲೆದ್ದು, ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ. ವಿವರ ➘ 11



## ಪಾಕ್ ಮಾತಿನಂತಿದೆ ಪ್ರತಿಪಕ್ಷಗಳ ಹೇಳಿಕೆ

ಪೌರತ್ವ (ತಿದ್ದುಪಡಿ) ಮಸೂದೆ ವಿಚಾರದಲ್ಲಿ ಪ್ರತಿಪಕ್ಷಗಳು ಪಾಕಿಸ್ತಾನದ ಭಾಷೆಯಲ್ಲಿ ಮಾತನಾಡುತ್ತಿವೆ. ಆದರೆ ಈಗ ಮಸೂದೆಗೆ ರಾಜ್ಯಸಭೆಯಲ್ಲಿ ಅಂಗೀಕಾರ ದೊರೆತಿದ್ದಕ್ಕೆ ಖುಷಿಯಾಗಿದೆ. ಇದು ಭಾರತಕ್ಕೆ ಹಾಗೂ ನಮ್ಮ ದೇಶದ ಭ್ರಾತೃತ್ವ ಹಾಗೂ ಸಹಾನುಭೂತಿಯ ವೈಶಿಷ್ಟ್ಯಕ್ಕೆ ಐತಿಹಾಸಿಕ ದಿವಸ. ಇದರ ಪರ ಮತ ಹಾಕಿದ ಎಲ್ಲ ಸಂಸದರಿಗೂ ಅಭಿನಂದನೆ. ಧಾರ್ಮಿಕ ಕಿರುಕುಳದಿಂದ ನರಳುತ್ತಿದ್ದ ಅನೇಕರ ಬಳಲಿಕೆಯನ್ನು ಈ ಮಸೂದೆ ನಿವಾರಿಸಲಿದೆ.

• **ನರೇಂದ್ರ ಮೋದಿ** ಪ್ರಧಾನಿ



## ಭಾರತದ ಸಾಂವಿಧಾನಿಕ ಇತಿಹಾಸದಲ್ಲಿ ಕರಾಳ ದಿನ

ಪೌರತ್ವ ಮಸೂದೆಯ ಅಂಗೀಕಾರ ಭಾರತದ ಸಾಂವಿಧಾನಿಕ ಇತಿಹಾಸದಲ್ಲೇ ಕರಾಳ ದಿನ. ದೇಶದ ಬಹುತ್ವದ ವಿರುದ್ಧ ಸಂಕುಚಿತ ಮನಸ್ಸುಗಳು ಮತ್ತು ಧರ್ಮಾಂಧ ಶಕ್ತಿಗಳ ವಿಜಯದ ದಿನವಾಗಿದೆ. ಬಿಜೆಪಿಯ ಅಪಾಯಕಾರಿಯಾದ ವಿಭಜಕ ಮತ್ತು ಧ್ರುವೀಕರಿಸುವ ಕಾರ್ಯಸೂಚಿ ವಿರುದ್ಧ ಹೋರಾಟಕ್ಕೆ ಕಾಂಗ್ರೆಸ್ ಕಟಿಬದ್ಧವಾಗಿದೆ ಎಂಬುದನ್ನು ಪುನರುಚ್ಚರಿಸುತ್ತೇನೆ.

• **ಸೋನಿಯಾ ಗಾಂಧಿ** ಕಾಂಗ್ರೆಸ್ ಅಧ್ಯಕ್ಷೆ

ಪತ್ರಿಕೆ ತುಣುಕು

ವಿಷಯ: ಸಂಸತ್

ಪತ್ರಿಕೆ: ಕನ್ನಡ ಪ್ರಭ

ದಿನಾಂಕ 12/12/2019

# ಸಂಸತ್ತಿನಲ್ಲಿ ಪೌರತ್ವ ಮಸೂದೆ ಪಾಸ್

12-12-19

◄ ಮೊದಲ ಪುಟದಿಂದ

ಮಸೂದೆ ಅಂಗೀಕಾರದ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಪ್ರಧಾನಿ ನರೇಂದ್ರ ಮೋದಿ, 'ಮಸೂದೆಗೆ ರಾಜ್ಯಸಭೆಯಲ್ಲಿ ಅಂಗೀಕಾರ ದೊರೆತಿದ್ದಕ್ಕೆ ಖುಷಿಯಾಗಿದೆ. ಇದು ಭಾರತಕ್ಕೆ ಹಾಗೂ ನಮ್ಮ ದೇಶದ ಭ್ರಾತೃತ್ವ ಹಾಗೂ ಸಹಾನುಭೂತಿಯ ವೈಶಿಷ್ಟ್ಯಕ್ಕೆ ಐತಿಹಾಸಿಕ ದಿವಸ' ಎಂದು ಹರ್ಷ ವ್ಯಕ್ತಪಡಿಸಿದ್ದಾರೆ. ಮತ್ತೊಂದೆಡೆ ಇದು ಭಾರತದ ಸಾಂವಿಧಾನಿಕ ಇತಿಹಾಸದಲ್ಲಿ ಅತ್ಯಂತ ಕರಾಳ ದಿನ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ನಡುವೆ ಪ್ರತಿಪಕ್ಷಗಳು ಸದನದಲ್ಲಿ ಕೋರ್ಟ್‌ಗೆ ಹೋಗುವ ವಿಷಯ ಮಾತನಾಡಿರುವ ಕಾರಣ, ಶೀಘ್ರದಲ್ಲೇ ತಿದ್ದುಪಡಿ ಕಾಯ್ದೆ ವಿರೋಧಿಸಿ ಅವು ಸುಪ್ರೀಂ ಕೋರ್ಟ್ ಕದ ಬಡಿಯುವ ಸಾಧ್ಯತೆ ಇದೆ.

ಇದೇ ವೇಳೆ ಮಸೂದೆ ವಿರೋಧಿ ಅಸ್ಸಾಂ, ತ್ರಿಪುರಾ ಸೇರಿದಂತೆ ಈಶಾನ್ಯ ರಾಜ್ಯಗಳಲ್ಲಿ ಭಾರೀ ಪ್ರತಿಭಟನೆ ನಡೆದಿದೆ. ಹಿಂಸಾಚಾರ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ ಅರೆಸೇನಾಪಡೆ ಮತ್ತು ಸೇನೆಯನ್ನು ನಿಯೋಜಿಸಿದೆ.

**ಭಾರೀ ವಾಕ್ಸಮರ:** ಗೃಹ ಸಚಿವ ಅಮಿತ್ ಶಾ ಮಂಡಿಸಿದ್ದ ಪೌರತ್ವ ತಿದ್ದುಪಡಿ ಮಸೂದೆ ಕುರಿತು ಸರ್ಕಾರ ಹಾಗೂ ಪ್ರತಿಪಕ್ಷಗಳ ಸದಸ್ಯರ ನಡುವೆ ಸುದೀರ್ಘ ವಾಕ್ಸಮರ ನಡೆಯಿತು. ಪ್ರತಿಪಕ್ಷಗಳು, 'ಈ ಮಸೂದೆ ಧರ್ಮಾಧಾರಿತವಾಗಿದೆ. ಸಂವಿಧಾನ ಹಾಗೂ ಸಮಾನತೆಯ ವಿರೋಧಿ ವಿಧೇಯಕವಿದು' ಎಂದು ಟೀಕಿಸಿ, 'ನ್ಯಾಯಾಲಯದಲ್ಲಿ ಈ ವಿಧೇಯಕಕ್ಕೆ ಸೋಲಾಗಲಿದೆ' ಎಂದು ಭವಿಷ್ಯ ನುಡಿದವು. ಆದರೆ 'ಈ ಮಸೂದೆ ಯಾವ ಧರ್ಮದ ವಿರುದ್ಧವೂ ಅಲ್ಲ. ನಿರಾಶ್ರಿತ ವಿದೇಶೀ ಅಲ್ಪಸಂಖ್ಯಾತರಿಗೆ ಪೌರತ್ವ ನೀಡುವ ಮಸೂದೆ ಇದು. ಇದನ್ನು ವಿರೋಧಿಸುವ ಮೂಲಕ ಕಾಂಗ್ರೆಸ್ ಪಕ್ಷ ಪಾಕಿಸ್ತಾನದ ರೀತಿ ಮಾತನಾಡುತ್ತಿದೆ' ಎಂದು ಗೃಹ ಸಚಿವ ಅಮಿತ್ ಶಾ ಖಡಕ್ಕಾಗಿ ಸಮರ್ಥಿಸಿದರು.

ಇದೇ ವೇಳೆ ಮಸೂದೆಯನ್ನು ಹೆಚ್ಚಿನ ಪರಾಮರ್ಶೆಗೆ ಸಂಸತ್ತಿನ 'ಸೆಲೆಕ್ಟ್ ಕಮಿಟಿ'ಗೆ ಒಪ್ಪಿಸಬೇಕು ಎಂದು ಪ್ರತಿಪಕ್ಷಗಳು ಪ್ರಸ್ತಾವನೆ ಮಂಡಿಸಿದವು. ಆದರೆ ಪ್ರಸ್ತಾವನೆ ಪರ 99 ಮತ ಬಂದರೆ 124 ಮತಗಳು ವಿರುದ್ಧವಾಗಿ ಬಂದವು. ಪ್ರತಿಪಕ್ಷಗಳ ಸದಸ್ಯರು ಮಂಡಿಸಿದ ಇತರ ತಿದ್ದುಪಡಿಗಳಿಗೂ ಸೋಲಾಯಿತು.

**ಮುಸ್ಲಿಮರಿಗೆ ಶಾ ಅಭಯ:** ರಾಜ್ಯಸಭೆಯಲ್ಲಿ ಪ್ರತಿಪಕ್ಷಗಳ ಸದಸ್ಯರ ಆಕ್ಷೇಪಗಳಿಗೆ ಉತ್ತರಿಸಿ ಮಾತನಾಡಿದ ಗೃಹ ಸಚಿವ ಅಮಿತ್ ಶಾ, 'ಮಸೂದೆಯಿಂದ ಭಾರತೀಯ ಮುಸ್ಲಿಮರು ಭಯ ಪಡಬೇಕಿಲ್ಲ. ಇಲ್ಲಿನ ಮುಸ್ಲಿಮರು ಭಾರತೀಯ ನಾಗರಿಕರಾಗಿಯೇ ಮುಂದುವರಿಯಲಿದ್ದಾರೆ' ಎಂದು ಸ್ಪಷ್ಟಪಡಿಸಿದರು.

**ಸರ್ಕಾರದ ನೆರವಿಗೆ ಮಿತ್ರರು, ಇತರರು:** ಅಮಿತ್ ಶಾ ಉತ್ತರಿಸಿದ ನಂತರ ನಡೆದ ವಿಧೇಯಕದ ಮತದಾನದಲ್ಲಿ ಸರ್ಕಾರದ ನೆರವಿಗೆ ಬಿಜೆಪಿ ಸದಸ್ಯರಲ್ಲದೆ, ಮಿತ್ರಪಕ್ಷಗಳಾದ ಶಿರೋಮಣಿ ಅಕಾಲಿದಳ, ಜೆಡಿಯು ಸದಸ್ಯರು ಧಾವಿಸಿದರು. ಅಲ್ಲದೆ, ತೆಲುಗುದೇಶಂ, ಅಣ್ಣಾಡಿಎಂಕೆ, ವೈಎಸ್ಸಾರ್ ಕಾಂಗ್ರೆಸ್ ಹಾಗೂ ಬಿಜು ಜನತಾದಳ ಸದಸ್ಯರೂ ವಿಧೇಯಕದ ಪರ ಮತ ಹಾಕುವುದರೊಂದಿಗೆ ಸರ್ಕಾರ ಜಯಶಾಲಿಯಾಯಿತು.

## ಗೆಲುವು ಹೀಗಾಯ್ತು

| | |
|---|---|
| ರಾಜ್ಯಸಭೆಯ ಒಟ್ಟು ಬಲ | 245 |
| ಖಾಲಿ ಸ್ಥಾನ | 5 |
| ಹಾಲಿ ಸದಸ್ಯರು | 240 |
| ಮತದಾನದ ವೇಳೆ ಇದ್ದ ಸದಸ್ಯರು | 230 |
| ಮಸೂದೆ ಪರ | 125 |
| ಮಸೂದೆ ವಿರುದ್ಧ | 105 |